ನಾನು ಮುನ್ನಾ ಮಲಗಿದಲ್ಲಿಗೆ ಬಂದೆ. ಕರುಳು ಕಿತ್ತು ಬಂತು ಅವಳನ್ನು ನೋಡಿ. ಅಂಗಾತ ಮಲಗಿರುವ ಮುನ್ನಾ ಮೊದಲಿಗಿಂತ ದಷ್ಟಪುಷ್ಟಳಾಗಿ ಬೆಳೆದಿದ್ದಾಳೆ. ಆದರೇನು ಪ್ರಯೋಜನ. ಯಥಾ ಸ್ಥಿತಿ. ನಡೆಯಿಲ್ಲ ನುಡಿಯಿಲ್ಲ. ಪಿಳಿಪಿಳಿ ಕಣ್ಣರಳಿಸಿ ನೋಡಿದಳು. ಹತ್ತಿರ ಹೋದೆ ಮುಖ ಸವರೋಣ ಎಂದು.

‘ಮುಟ್ಟಬೇಡ ಅವಳು ಮುಟ್ಟು’ ಎಂದಳು. ನಾನು ದೂರ ನಿಂತೆ. ಒಂದುಗಂಟೆ ಬಿಟ್ಟು ಕುಸುಮಾ ಮುನ್ನಾಳ ಒಳಉಡುಪುಗಳನ್ನು ಬಿಚ್ಚಿ ಸ್ವಚ್ಛಗೊಳಿಸಿ ಹೊಸದನ್ನು ತೊಡಿಸಿದಳು. ಉಚ್ಚೆ ಕಕ್ಕಸು ಎಷ್ಟು ಹೊತ್ತಿಗೆ ಮಾಡುತ್ತಾಳೆ ಎನ್ನುವುದೆಲ್ಲಾ ಕುಸುಮಾಳಿಗೆ ತಿಳಿದಿತ್ತು. ಅಷ್ಟು ಹೊತ್ತಿಗೆ ಬೆಡ್‌ಪ್ಯಾನ್ ತಂದು ಇಡುತ್ತಿದ್ದಳು. ಇದರಿಂದಾಗಿ ಮುನ್ನಾಳ ಸುತ್ತಮುತ್ತ ಒಂದಿಷ್ಟೂ ವಾಸನೆ ಇಲ್ಲ. ಎಷ್ಟು ಸ್ವಚ್ಛವಾಗಿಟ್ಟಿದ್ದಾಳೆ ಎಂದುಕೊಂಡೆ.

‘ಎಷ್ಟು ವರ್ಷ ಈ ನರಕ ಯಾತನೆ ಅನುಭವಿಸುತ್ತೀಯ’ ಎಂದು ಕೇಳಿದೆ.

‘ಹಾಗೆಲ್ಲಾ ನೀನು ಕೇಳಬಾರದು ಹೇಮಾ, ಮುನ್ನಾ ನನ್ನ ಮಗಳು. ಅವಳು ಹೇಗೆ ಇರಲಿ ನಾನು ಸಮಸ್ಯೆ ಎಂದು ಅಂದುಕೊಂಡಿದ್ದರೆ ಈ ರೀತಿ ಸೇವೆ ಮಾಡಲು ಸಾಧ್ಯವಾಗುತ್ತಿತ್ತೇ ನನ್ನಿಂದ. ನಾನು ಅಮ್ಮ ಕಣೆ ಅಮ್ಮ. ಅಮ್ಮನ

